## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಲಯ ದಕ್ಷಿಣ

ಜಯನಗರ ಪೂರ್ವ, ವಾರ್ಡ್ ಸಂಖ್ಯೆ: 170

ದಿನಾಂಕ: 07.11.2020 ರಂದು ವಾರ್ಡ್ ಸಂ: 170 ಜಯನಗರ ಪೂರ್ವದಲ್ಲಿ ನಡೆದ ವಾರ್ಡ್ ಸಭೆ:

**ಸಮಿತಿ ಸಭೆಯ ನಡವಳಿಗಳು**

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು:-

| | |
|---|---|
| 1) ಶ್ರೀಮತಿ ಸಂಧ್ಯಾರಾಣಿ | ಅಧ್ಯಕ್ಷರು |
| 2) ಶ್ರೀ. ಲೋಕೇಶ್.ಎಸ್ | ಹಿರಿಯ ಆರೋಗ್ಯ ಪರೀವಿಕ್ಷರು |
| 3) ಶ್ರೀ ಪ್ರಕಾಶ್ | ಕಂದಾಯ ಪರೀವಿಕ್ಷಕರು |
| 4) ಶ್ರೀ ದೇವಾಸಗಾಯಂ | ಕೆಲಸ ಪರೀವಿಕ್ಷಕರು |
| 5) ಶ್ರೀ. ಗೌತಮ್.ವೈ | ಕಿರಿಯ ಆರೋಗ್ಯ ಪರೀವಿಕ್ಷಕರು |
| 6) ಶ್ರೀ ಇ.ನಾರಯಣ ಸ್ವಾಮಿ | ಸ್ಯಾನಿಟರಿ ಧಫೇದಾರ್ |
| 7) ಶ್ರೀ ರಾಮಚಂದ್ರ | ಸ್ಯಾನಿಟರಿ ಧಫೇದಾರ್ |
| 8) ಶ್ರೀ ಉಮೇಶ್ | ಸಹಾಯಕ ಅಭಿಯಂತರರು(ವಿದ್ಯುತ್) |
| 9) ಶ್ರೀ ಪಿ.ಎಂ. ಶ್ರೀನಿವಾಸ್ ಮೂರ್ತಿ | ಬೆಂಗಳೂರು ಜಲಮಂಡಳಿ |
| 10) ಶ್ರೀ ಬಿ ಆರ್ ಜಯಶಂಕರ್ | ಬೆ.ವಿ.ಕಂ |
| 11) ಶ್ರೀ ಶ್ರೀನಿವಾಸ್ | ಸ್ಥಳೀಯಾ ನಾಗರೀಕರು |
| 12) ಶ್ರೀ ಸಂತೋಷ್ ಕುಮಾರ್.ಬಿ ಸಹಾಯಕ ಅಭಿಯಂತರರು(ಪ್ರಭಾರ) | ಕಾರ್ಯಾದರ್ಶಿ ಮತ್ತು ಸಂಚಾಲಕರು |

ವಾರ್ಡ್: ಸಮಿತಿ ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರುತ್ತಾ, ಸಭೆಯನ್ನು ಪ್ರಾರಂಭಿಸಿದರು:

1) ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ 17.10.2020 ರಂದು ತಿಳಿಸಿದ ಸಾರ್ವಜನಿಕರು ಮತ್ತು ನೌಕರರು ತಿಳಿಸಿದ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು.
2) ಶ್ರೀ ಶ್ರೀನಿವಾಸ್ ರವರು ಮಾತನಾಡಿ, ಅರಸು ಕಾಲೋನಿ ನಿವಾಸಿಗಳಿಗೆ ವೋಟರ್ ಐಡಿಗಳ ವಿತರಿಸುವ ಬಗ್ಗೆ ಕೋರಿರುತಾರೆ (ಕ್ರಮ ಶ್ರೀ ಪ್ರಕಾಶ್ , ಕಂದಾಯ ಪರಿವೀಕ್ಷಕರು).
3) ಘನತ್ಯಾಜ್ಯ ವಿಲೇವಾರಿ ಮಾಡುವ ವಾಹನಗಳಿಗೆ RFID ಮತ್ತು GPS ಸದಾನಗಳನ್ನು ಅಳವಾಡಿಸಲಾಗುತ್ತಿರುವ ಬಗ್ಗೆ ಶ್ರೀ ಗೌತಮ್ , ಕಿ.ಆ.ಪ ರವರು ಸಭೆಗೆ ಮಾಹಿತಿ ಒದಗಿಸದರು.

4) ಈಸ್ಟ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿಯು ನಿಧಾನವಾಗಿ ಸಾಗುತ್ತಿರುವುದರಿಂದ ಅಕ್ಕಪಕ್ಕದ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರಿಗೆ ಮತ್ತು ಸಾರ್ವಜನಿಕರಿಗೆ ಅನನೂಕುಲತೆ ಯಾಗುತ್ತಿರುವ ಬಗ್ಗೆ ಶ್ರೀ ಶ್ರೀನಿವಾಸ್ ರವರು ಸಭೆಗೆ ತಿಳಿಸಿದರು (ಕ್ರಮ ಯೋಜನೆ ಕೇಂದ್ರ) ಹಾಗೂ ಮುಂದಿನ ಸಭೆಗೆ, ಈ ಕಾಮಗಾರಿಯ ಸಂಬಂಧಿಸದ ಅಧಿಕಾರಿಗಳನ್ನು ಅಹ್ವಾನಿಸಲು ಮಾನ್ಯ ಅದ್ಯಕ್ಷರು ಸೂಚಿಸಿದರು.

5) ಬೀದಿ ದೀಪಗಳ ನಿರ್ವಹಣೆ ಬಗ್ಗೆ ಶ್ರೀ ಉಮೇಶ್ ಸ.ಅ(ವಿದ್ಯುತ್) ರವರು ಮಾತನಾಡಿ , ಸಾರ್ವಜನಿಕರಿಂದ ಬರುವ ದೂರುಗಳನ್ನು ಅಗಿಂದ್ದಾಗೆ ವಿಲೇವಾರಿ ಮಾಡುತ್ತಿರುವ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಿದರು.

6) ಕಂದಾಯ ವಸೂಲಾತಿ ಬಗ್ಗೆ ಮಾನ್ಯ ಅಧ್ಯಕ್ಷರು ವಿಚಾರಿಲಾಗಿ, ಕಂದಾಯ ಪರಿವೀಕ್ಷಕರಾದ ಶ್ರೀ ಪ್ರಕಾಶ್ ರವರು ಮಾತನಾಡಿ, ಈವೆರೆಗೆ ಶೇ 60 ರಷ್ಟು ಕಂದಾಯ ವಸೂಲಾಗಿದ್ದು, ಇನ್ನುಳಿದ ಶೇ 40ರಷ್ಟು ಕಂದಾಯ ವಸೂಲಾತಿಗಾಗಿ ಕಾರಣ ಕೇಳಿ ಪತ್ರವನ್ನು ಕಳುಹಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

7) ಕೋವಿಡ್-19 ವಿಚಾರವಾಗಿ ಚರ್ಚಿಸಲಾಗಿ, ಕೋವಿಡ್-19 ಪರೀಕ್ಷೆ, ಅದಕ್ಕೆ ಒದಗಿಸು ಉಚಿತ ಔಷದಿಗಳ ಬಗ್ಗೆ, ಶ್ರೀ ಲೋಕೇಶ್ .ಹಿ.ಆ.ಪ ರವರು ಮಾಹಿತಿಯನ್ನು ಒದಗಿಸಿದರು.

8) ಶ್ರೀ ಶ್ರೀನಿವಾಸ್ ರವರು ಮಾತನಾಡಿ ಅರ್ಹ ಫಲಾನುಭವಿಗಳಿಗೆ ಪಾಲಿಕೆ ವತಿಯಿಂದ ನೀಡುವ ಉಚಿತ ಹೊಲಿಗೆ ಯಂತ್ರವನ್ನು ಒದಗಿಸುವಂತೆ ಕೋರಿದರು (ಕ್ರಮ: ಕಲ್ಯಾಣ ಇಲಾಖೆ, ದಕ್ಷಿಣ).

9) ಕಾರ್ಮೇಲ್ ಶಾಲೆ ಹತ್ತಿರ ಇರುವ ಕುಡಿಯುವ ನೀರಿನ ಘಟಕಕ್ಕೆ ಹೂಸದಾಗಿ ಕೊಳವೆ ಬಾವಿಯನ್ನು ಕೊರೆಸುವಂತೆ ಶ್ರೀನಿವಾಸ್ ರವರು ಕೋರಿದಲು (ಕ್ರಮ: ಸ,ಅ (ಕಾಮಗಾರಿ)).

**ನಿರ್ಣಯ:-** ಈ ವಿಷಯಕ್ಕೆ ಸಮಿತಿಯು ಒಪ್ಪಗೆ ತಿಳಿಸಿರುತ್ತಾರೆ. ವಾರ್ಡ್ ಸಮೀತಿಯ ಮಾರ್ಪಿಡಿತ ಮೇಲೆ ಕಾಣಿಸಿರುವ ಎಲ್ಲಾ ವಿಷಯಗಳನ್ನು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಸೂಚಿಸಿದರು, ವಾರ್ಡ್ ಸಮಿತಿಯ ಅಧ್ಯಕರು ಸದಸ್ಯರುಗಳಿಗೆ ಹಾಗೂ ಪಾಲಿಕೆ ಅಧಿಕಾರಿಗಳಿಗೆ ವಂದಾನಾರ್ಪಣೆ ತಿಳಿಸುತ್ತಾ ದಿ: 21.11.2020ರಂದು ಬೆಳ್ಳಗೆ 10.00ಗಂಟೆಗೆ ಮತ್ತೆ ಸಭೆ ಸೇರಲು ಹಾಗೂ ಆ ಸಭೆಯಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಅಧಿಕಾರಿಗಳು ಸಭೆ ಹಾಜರಾಗುವಂತೆ, ಪತ್ರ ಕಳುಹಿಸುವಂತೆ ತಿಳಿಸಿದರು .

Suma l. B 07 'Nov'

**ಕಾರ್ಯದರ್ಶಿ ಮತ್ತು ಸಂಚಾಲಕರು**
**ಹೆಸರು: ಸಂತೋಷ್ ಕುಮಾರ್.ಬಿ**
**ಸಹಾಯಕ ಅಭಿಯಂತರರು**